**ಓ.ಎಸ್. 28/2018, ಡಿ.ಡಬ್ಲೂ-2 ಹೆಸರುಃ ಸಿದ್ದಮ್ಮ**

**ದಿಃ28-04-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀ ಕೆ.ಎಸ್.ಎನ್. ವಕೀಲರಿಂದಃ**

ನನ್ನ ತಂದೆ ಇಬ್ಬರನ್ನ ವಿವಾಹವಾಗಿದ್ದು, ಮೊದಲನೇ ಪತ್ನಿ ದ್ಯಾಮಕ್ಕ ಹಾಗೂ ಎರಡನೇ ಪತ್ನಿ ಶಾಂತಮ್ಮ. ನಾನು ಶಾಂತಮ್ಮ ರವರ ಮಗಳು. ನನ್ನ ದೊಡ್ಡಮ್ಮರವರಾದ ದ್ಯಾಮಕ್ಕ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ನನ್ನ ತಂದೆಯ ಮೊದಲನೇ ಪತ್ನಿಯಾದ ದ್ಯಾಮಕ್ಕ ರವರಿಗೆ ಮಕ್ಕಳು ಇಲ್ಲದ ಕಾರಣ ಸದರಿರವರ ಕುರಿತು ವಾದ ಪತ್ರದ 2 ನೇ ಖಂಡಿಕೆಯಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿತ 14 ನೇ ಖಂಡಿಕೆಯ ಸ್ವತ್ತು ನಮ್ಮ ಅಜ್ಜನಿಂದ ಬಂದಿರುತ್ತದೆ. ಸದರಿ ಸ್ವತ್ತು ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ನನ್ನ ತಂದೆಯ ಮರಣಾ ನಂತರ ಸದರಿ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದು ಇದೆ. 1 ನೇ ಪ್ರತಿವಾದಿ ಯಾವ ದಾಖಲಾತಿ ಆಧಾರದಲ್ಲಿ ಆತನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಅನುಸೂಚಿತ 14 ನೇ ಖಂಡಿಕೆಯ ಸ್ವತ್ತಿನ ಪಕ್ಕದಲ್ಲಿ ಒಂದು

ಪಂಚಾಯಿತಿಯಿಂದ ನೀಡಿರುವ ನಿವೇಶನ ಹಾಗೂ ನಾವು ಖರೀದಿಸಿರುವ ಹುಲ್ಲು ಮನೆ ಇದೆ. 1 ನೇ ಪ್ರತಿವಾದಿಯ ಹೆಸರಿಗೆ ನಿವೇಶನವನ್ನು ಪಂಚಾಯಿತಿಯಿಂದ ನೀಡಿರುವ ಬಗ್ಗೆ ದಾಖಲಾತಿಯನ್ನು ನೀಡಿದ್ದೇನೆ. ಸದರಿ ನಿವೇಶನದ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿಗೆ ಪಂಚಾಯಿತಿಯಿಂದ ಯಾವಾಗ ನೀಡಿರುತ್ತಾರೆ ಎಂದು ನೆನಪಿಲ್ಲ. 1 ನೇ ಪ್ರತಿವಾದಿಗೆ ಪಂಚಾಯಿತಿಯಿಂದ ನಿವೇಶನವನ್ನು ನೀಡುವ ಕಾಲಕ್ಕೆ ನನ್ನ ತಂದೆ ಬದುಕಿದ್ದರಾ ಅಥವಾ ಇಲ್ಲವ ಎಂದು ನನಗೆ ಗೊತ್ತಿಲ್ಲ. ಕೊಳಹಾಳ್ ಗ್ರಾಮದಲ್ಲಿ ನಮ್ಮ ಮನೆಯ ಪಕ್ಕದಲ್ಲಿ ನಿವೇಶನವನ್ನು ಖರೀದಿಸಿರುತ್ತಾರೆ. ಲಕ್ಷ್ಮಣ್ಣ ಎಂಬುವವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ತುಂಬಾ ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿದ್ದು, ಯಾವಾಗ ಎಂದು ನೆನಪಿಲ್ಲ. ಸದರಿ ನಿವೇಶನವನ್ನು ಖರೀದಿಸುವ ಕಾಲಕ್ಕೆ ನಾನು, ನನ್ನ ತಂದೆ, ವಾದಿ ಹಾಗೂ 1 ನೇ ಪ್ರತಿವಾದಿ ಬೇರೆ ಬೇರೆ ಇದ್ದೆವು. 1 ನೇ ಪ್ರತಿವಾದಿ ನೌಕರಿಯಲ್ಲಿ ಇದ್ದು, ಅದರಿಂದ ಬಂದಂತಹ ಆದಾಯದಿಂದ ನಿವೇಶನವನ್ನು ಖರೀದಿಸಿರುತ್ತಾರೆ.

2. ಖರೀದಿ ಮಾಡಿರುವಂತಹ ನಿವೇಶನದಲ್ಲಿ 1 ನೇ ಪ್ರತಿವಾದಿ ಮನೆಯನ್ನು ನಿರ್ಮಿತಿ ಮಾಡಿದ್ದು, ಸದರಿ ಮನೆಯನ್ನು ನಿರ್ಮಿತಿ ಮಾಡಿ 25 ವರ್ಷಗಳಾಗಿವೆ. ಸದರಿ ಮನೆಯನ್ನು ನಿರ್ಮಿತಿ ಮಾಡಿದ ಕಾಲಕ್ಕೆ ನನ್ನ ತಂದೆ ಮೃತಪಟ್ಟಿದ್ದರು. ಸದರಿ ನಿವೇಶನವನ್ನು ಖರೀದಿ ಮಾಡಿದ ಕಾಲಕ್ಕೆ ನನ್ನ ತಂದೆ ಇದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ನನಗೆ ಮೂರು ಜನ ಮಕ್ಕಳು, ಅವರ ಹೆಸರು ಪಾರ್ವತಮ್ಮ, ಬಸಮ್ಮ, ಮತ್ತು ಮಂಜುನಾಥ. ನನ್ನ ಎರಡನೇ ಮಗಳು ಬಸಮ್ಮ ಮೃತಪಟ್ಟಿರುತ್ತಾರೆ. ನನ್ನ ಎರಡನೇ ಮಗಳ ಪತಿ ಜಗದೀಶ್ ಚಳ್ಳಕೆರೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಮೊದಲನೇ ಮಗಳಾದ ಪಾರ್ವತಮ್ಮ ರವರನ್ನು ನನ್ನ ತಮ್ಮನಾದ 1 ನೇ ಪ್ರತಿವಾದಿಗೆ ಕೊಟ್ಟು ವಿವಾಹ ಮಾಡಿದ್ದೇನೆ ಎಂದರೆ ಸರಿ. ನನ್ನ ಮಗಳ ವಿವಾಹದ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ನನ್ನ ಪತಿ ಸುಮಾರು ವರ್ಷಗಳ ಹಿಂದೆಯೇ ಎಲ್ಲಿಯೋ ಹೋಗಿದ್ದು, ಹಾಗಾಗಿ ನನ್ನ ಮಗಳ ವಿವಾಹದ ಜಾವಾಬ್ದಾರಿಯನ್ನು ನನ್ನ ತಂದೆ ತೆಗೆದುಕೊಂಡು ವಿವಾಹದ ಖರ್ಚನ್ನು ನನ್ನ ತಂದೆ ಭರಿಸಿದ್ದರು ಎಂದರೆ ಸಾಕ್ಷಿ ನಾವು ಕೂಡ ಮಾಡಿದ್ದೆವು ಎಂದು ಹೇಳುತ್ತಾರೆ.

3. 3 ನೇ ಪ್ರತಿವಾದಿ ಮನೆಯಲ್ಲಿಯೇ ಇದ್ದಾರೆ. ನನ್ನ ಎರಡನೇ ಮಗಳ ಮಕ್ಕಳಾದ ವೀಣಾ ಮತ್ತು ಶಿವಕುಮಾರ ಕೆಲಸದಲ್ಲಿ ಇದ್ದು, ಎಲ್ಲಿ ಇದ್ದಾರೆ ಎಂದು ಗೊತ್ತಿಲ್ಲ. ನಾನು ನನ್ನ ಮೊಮ್ಮಕ್ಕಳೊಂದಿಗೆ ಹೆಚ್ಚಾಗಿ ಸಂಪರ್ಕದಲ್ಲಿ ಇಲ್ಲ, ಹಾಗಾಗಿ ತಿಳಿದುಕೊಂಡಿಲ್ಲ. ನನ್ನ ಮಗಳು ಮೃತಪಟ್ಟಿರುವ ಕಾರಣ ನನ್ನ ಮೊಮ್ಮಕ್ಕಳೊಂದಿಗೆ ನಾನು ಅಷ್ಟಾಗಿ ಸಂಪರ್ಕದಲ್ಲಿ ಇಲ್ಲ. ನನ್ನ ಮೂರನೇ ಮಗ ಮಂಜುನಾಥ ವ್ಯವಸಾಯ

ಮಾಡುತ್ತಿದ್ದು, ಕೊಳಹಾಳು ಗ್ರಾಮದಲ್ಲಿ ಇದ್ದಾರೆ.  ನನ್ನ ಮಗನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನಿದ್ದು, 4 ನೇ ಪ್ರತಿವಾದಿ ನನ್ನ ಮಗನ ಮಗನಾಗಿರುತ್ತಾನೆ.

4. ನಿಪಿ.1 ರಂತೆ 4 ನೇ ಪ್ರತಿವಾದಿಯ ಹೆಸರಿಗೆ ನೊಂದಣಿ ದಾನ ಪತ್ರವನ್ನು ಮಾಡಲು ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ.  ಸದರಿ ಸ್ವತ್ತು ವಾದಿ ಮತ್ತು 1 ನೇ ಪ್ರತಿವಾದಿ ಹಾಗೂ ನನ್ನ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.  ನಿಪಿ.1 ರ ನೊಂದಣಿ ದಾನ ಪತ್ರದ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಎಂಬ ಬಗ್ಗೆ ನಾನು ನ್ಯಾಯಾಲಯಕ್ಕೆ ಕ್ರಯಪತ್ರವನ್ನು ಹಾಜರುಪಡಿಸಿದ್ದೇನೆ.  ದಾವಾ ಅನುಸೂಚಿತ 12 ನೇ ಖಂಡಿಕೆಯ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.  ದಾವಾ ಅನುಸೂಚಿತ 4 ನೇ ಖಂಡಿಕೆಯ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.  ದಾವಾ ಅನುಸೂಚಿತ 11 ನೇ ಖಂಡಿಕೆಯ ಸ್ವತ್ತಿನ ಕುರಿತು 3 ನೇ ಪ್ರತಿವಾದಿ ಅಲ್ಪವಯಿ ಆಗಿದ್ದ ಸಮಯದಲ್ಲಿ ನಾನು ನೈಸರರ್ಗಿಕ ಸಂರಕ್ಷಕಳಾಗಿ ಕ್ರಯಕ್ಕೆ ಪಡೆದಿರುತ್ತೇನೆ.  ಸದರಿ ಸ್ವತ್ತು ಒಟ್ಟು ಕುಟುಂಬದ ಪರವಾಗಿ ಕ್ರಯಕ್ಕೆ ಪಡೆದುಕೊಂಡಂತಹ ಸ್ವತ್ತು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮದ್ಯಾಹ್ನಕ್ಕೆ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**ಓ.ಎಸ್. 28/2018, ಡಿ.ಡಬ್ಲೂ-2 ಹೆಸರುಃ ಸಿದ್ದಮ್ಮ**

**ದಿಃ28-04-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀ ಕೆ.ಎಸ್.ಎನ್. ವಕೀಲರಿಂದಃ**

5. ನನ್ನ ಪತಿಯನ್ನು ಅವರು ಚಿಕ್ಕವರಾದಾಗಿನಿಂದಲೂ ನನ್ನ ತಂದೆಯೇ ನಮ್ಮ ಮನೆಗೆ ಕರೆದುಕೊಂಡು ಬಂದು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಹಿರಿಯ ಮಗಳಾದ ಕಾರಣ ನನ್ನ ತಂದೆ ನನ್ನ ಪತಿಗೆ ಕೊಟ್ಟು ವಿವಾಹ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ವಿವಾಹದ ನಂತರ ಹಾಗೂ ನಮಗೆ ಮೂರು ಮಕ್ಕಳು ಜನಿಸಿದ ನಂತರ ನನ್ನ ಪತಿ ಎಲ್ಲಿಗೆ ಹೋದರು ಎಂದು ನಮಗೆ ತಿಳಿಯಲಿಲ್ಲ. ನಾನು ನನ್ನ ತಂದೆಯ ಹಿರಿಯ ಮಗಳಾದ ಕಾರಣ ಹಾಗೂ ನನ್ನ ಪತಿ ಎಲ್ಲೋ ಹೋದ ಕಾರಣ ನನಗೆ ಅನುಕೂಲ ಆಗಲಿ ಎಂದು ನನ್ನ ತಂದೆ ನನ್ನ ಹೆಸರಿಗೆ ಕೆಲವೊಂದು ಸ್ವತ್ತುಗಳ ಕುರಿತು ಕ್ರಯ ಮಾಡಿಸಿಕೊಟ್ಟರು ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಕ್ರಯಕ್ಕೆ ಪಡೆದುಕೊಂಡಂತಹ ಸ್ವತ್ತುಗಳ ಕುರಿತು ಪ್ರತಿಫಲದ ಮೊತ್ತವನ್ನು ನನ್ನ ತಂದೆ ಪಾವತಿಸಿದ್ದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ.2 ರ ಪಡಿತರ ಚೀಟಿಯಲ್ಲಿ ನನ್ನ ತಂಗಿಯ ಹೆಸರು ಇಲ್ಲ ಎಂದರೆ ಸರಿ. ನಿಡಿ.2 ರ ಪಡಿತರ ಚೀಟಿಯಲ್ಲಿ ನನ್ನ ತಂದೆ ಹಾಗೂ ನನ್ನ ಮತ್ತು 1 ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸಾಕ್ಷಿ ನನ್ನ ಮತ್ತು ನನ್ನ ತಂದೆಯ ಹೆಸರು ಇದೆ ಎಂದು ಹೇಳುತ್ತಾರೆ. ನಿಡಿ.2 ಜಾರಿಯಾಗುವ ಕಾಲಕ್ಕೆ 1 ನೇ ಪ್ರತಿವಾದಿ ಕೆಲಸದಲ್ಲಿ ಇದ್ದರು ಎಂದರೆ ಸಾಕ್ಷಿ ನಮಗೆ ಸೇರಿದ ಪಡಿತರ ಚೀಟಿಯನ್ನು ನಾವು ಮಾಡಿಸಿಕೊಂಡಿದ್ದು, 1 ನೇ ಪ್ರತಿವಾದಿ ಅವರಿಗೆ ಸೇರಿದ ಪಡಿತರ ಚೀಟಿಯ ಕಾರ್ಡನ್ನು ಬೇರೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದಂತೆ ನಾನು ಮತ್ತು ನನ್ನ ಮಕ್ಕಳಿಗೆ ಸಂಬಂಧಿಸಿದ ಪ್ರತ್ಯೇಕ ಪಡಿತರ ಚೀಟಿ ಇದೆ. ಸದರಿ ಪಡಿತರ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

6. ನನ್ನ ತಂದೆ ನಿಡಿ.8 ರಂತೆ 1 ಎಕರೆ 06 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನಾನು, ವಾದಿ ಮತ್ತು 1 ನೇ ಪ್ರತಿವಾದಿ ಬೇರೆ ಬೇರೆ ಇದ್ದೆವು. ನನ್ನ ತಂದೆ ನಿಡಿ.9 ರಂತೆ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳುವ ಕಾಲಕ್ಕೆ ನಾವೆಲ್ಲರೂ ಬೇರೆ ಬೇರೆ ಇದ್ದೆವು. ನಿಡಿ.8 ಮತ್ತು 9 ರ ಸ್ವತ್ತುಗಳು ಈಗ 1 ನೇ

ಪ್ರತಿವಾದಿಯ ಹೆಸರಿನಲ್ಲಿ ಇವೆ. ನಿಡಿ.10 ರಂತೆ ನನ್ನ ತಂದೆ ದಿನಾಂಕ 06.10.1997 ರಂದು ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ನಿಡಿ.10 ರ ಸ್ವತ್ತನ್ನು ಸಹ 1 ನೇ ಪ್ರತಿವಾದಿ ಸುಳ್ಳು ವಂಶವೃಕ್ಷವನ್ನು ನೀಡಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಡಿ.8 ರಿಂದ 10 ರ ಸ್ವತ್ತುಗಳ ಕುರಿತು 1 ನೇ ಪ್ರತಿವಾದಿ ಸುಳ್ಳು ವಂಶವೃಕ್ಷವನ್ನು ನೀಡಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

7. ನಿಡಿ.11 ರ ನೋಂದಣಿ ಕ್ರಯಪತ್ರದ ಕಾಲಕ್ಕೆ ನನ್ನ ತಂದೆ ಮೃತಪಟ್ಟಿದ್ದರು. ನಿಡಿ.11 ರ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.12 ರಂತೆ ದಾವಾ ಅನುಸೂಚಿತ 4 ನೇ ಖಂಡಿಕೆಯ ಸ್ವತ್ತನ್ನು 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಅವರ ಆದಾಯದಿಂದ ಅವರು ಕ್ರಯಕ್ಕೆ ಪಡೆದಿರುತ್ತಾರೆಂದು ಹೇಳುತ್ತಾರೆ. ದಾವಾ ಅನುಸೂಚಿತ 4 ನೇ ಖಂಡಿಕೆಯ ಸ್ವತ್ತನ್ನು ಸಹ ಒಟ್ಟು ಕುಟುಂಬದ ಆದಾಯದಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

8. ನನ್ನ ತಂದೆ ದಿನಾಂಕ 06.04.1999 ರಂದು ಮೃತಪಟ್ಟ ನಂತರ 1 ನೇ ಪ್ರತಿವಾದಿ ಸುಳ್ಳು ವಂಶವೃಕ್ಷವನ್ನು ನೀಡಿ ನನ್ನ ತಂದೆಯ ಹೆಸರಿನಲ್ಲಿ ಇದ್ದ ಸ್ವತ್ತುಗಳ ಕುರಿತು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಡಿ.14 ರಲ್ಲಿನ ಎಲ್ಲಾ ಸ್ವತ್ತುಗಳ ಕುರಿತು 1 ನೇ ಪ್ರತಿವಾದಿ ನನ್ನ ತಂದೆಯ ಮರಣಾ ನಂತರ ಸುಳ್ಳು ವಂಶವೃಕ್ಷವನ್ನು ನೀಡಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತುಗಳ ಪೈಕಿ ಯಾವುದೇ ಸ್ವತ್ತು ಸಹ ವಾದಿಯ ಹೆಸರಿನಲ್ಲಿ ಖಾತೆ ಇಲ್ಲ ಎಂದರೆ ಸರಿ. ವಾದಿ, ನಾನು, 1 ನೇ ಪ್ರತಿವಾದಿ ಹಾಗೂ ನನ್ನ ತಂದೆ ಒಟ್ಟು ಕುಟುಂಬದ ಸದಸ್ಯರಾಗಿ ದಾವಾ ಸ್ವತ್ತುಗಳ ಕುರಿತು ಒಟ್ಟು ಕುಟುಂಬದ ಪರವಾಗಿ ಇದ್ದೆವು ಎಂದರೆ ಸಾಕ್ಷಿ ಎಲ್ಲರೂ ಸಹ ಪ್ರಾಪ್ತವಯಸ್ಕರಾದ ನಂತರ ಅವರವರ ಪಾಡಿಗೆ ಬೇರೆ ಇದ್ದೇವೆ ಎಂದು ಹೇಳುತ್ತಾರೆ. ದಾವಾ ಅನುಸೂಚಿತ ಸ್ವತ್ತುಗಳ ಕುರಿತು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿದ್ದಂತಹ ಸ್ವತ್ತುಗಳ ಕುರಿತು ಹಾಗೂ 1 ನೇ ಪ್ರತಿವಾದಿ ಮತ್ತು ನನ್ನ ಹೆಸರಿನಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತುಗಳ ಕುರಿತು ಯಾವುದೆ ವಿಭಾಗ ಆಗಿಲ್ಲ ಎಂದರೆ ಎಲ್ಲಾ ಸ್ವತ್ತುಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಹಾಗೂ ಕೆಲವು ಸ್ವತ್ತುಗಳು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದು ಹೇಳುತ್ತಾರೆ. ನಾನು, 1 ನೇ ಪ್ರತಿವಾದಿ ಹಾಗೂ ವಾದಿ ನಿಡಿ.14 ರಲ್ಲಿ ನಮೂದಿಸಿರುವಂತಹ ಸ್ವತ್ತುಗಳಲ್ಲಿಯೇ ವಾಸ ಇದ್ದೆವು ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಚಿತ್ರದುರ್ಗದಲ್ಲಿ ಇದ್ದರು, ವಾದಿ ಆಕೆಯ ಪತಿಯ ಮನೆಯಲ್ಲಿ ಇದ್ದರು ಹಾಗೂ ನಾನು ನನ್ನ ಮನೆಯಲ್ಲಿ ಇದ್ದೆನು ಎಂದು ಹೇಳುತ್ತಾರೆ. ನಿಡಿ.14 ರ

ಸ್ವತ್ತುಗಳಲ್ಲಿನ ಮನೆಯಲ್ಲಿ 1 ನೇ ಪ್ರತಿವಾದಿ ವಾಸ ಇದ್ದಾರೆ. ನಿಡಿ.14 ರ ಸ್ವತ್ತುಗಳ ಕುರಿತು ವಾದಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸಾಕ್ಷಿ ನನಗೂ ಕೊಟ್ಟಿಲ್ಲ, ವಾದಿಗೂ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನನಗೆ ಭಾಗ ಬೇಕು ಎಂದು ಕೇಳಿಲ್ಲ.

9. ನಿಡಿ.24 ರಲ್ಲಿನ ವಂಶವೃಕ್ಷ ಈ ದಾವೆಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನನ್ನ ಪತಿಯ ತಂದೆಯ ಹೆಸರು ಹನುಮಪ್ಪ. ಹನುಮಪ್ಪ ರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು. ಏಳು ಜನರ ಪೈಕಿ ನನ್ನ ಪತಿ ಕೊನೆಯ ಮಗ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ